ಉಪಯೋಗಿಸಿಕೊಂಡು ರೋಗವನ್ನು ನಿಯಂತ್ರಿಸುವುದಕ್ಕೆ ಪ್ರಯತ್ನಿಸಬೇಕಾಗಿದೆಯೇ ವಿನಾ ಬೇರೆನೂ ಮಾಡಲು ಸಾಧ್ಯವಿಲ್ಲ.

ಅಧ್ಯಕ್ಷರು : ಮುಂದಿನ ಪ್ರಶ್ನೆ ಮಾನ್ಯ ಸದಸ್ಯರಾದ ಸೋಮಣ್ಣನವರದು. ಅವರ ಪ್ರಶ್ನೆಯನ್ನು ಮತ್ತೊಂದು ದಿವಸ ತೆಗೆದುಕೊಳ್ಳಬೇಕೆಂದು ಬೆಳಿಗ್ಗೆ ನನಗೆ ಫೋನ್ ಕರೆ ಮಾಡಿ ತಿಳಿಸಿರುವುದರಿಂದ ಬೇರೆ ದಿವಸ ತೆಗೆದುಕೊಳ್ಳುತ್ತೇನೆ.

ದೊಡ್ಡ ಬಳ್ಳಾಪುರ ತಾಲ್ಲೂಕಿನಲ್ಲಿರುವ ಅಂಗನವಾಡಿ ಕೇಂದ್ರಗಳಿಗೆ ಕಟ್ಟಡಗಳನ್ನು ನಿರ್ಮಿಸುವುದು

411 (3659) ಶ್ರೀ ಕೃಷ್ಣಪ್ಪ ಎ. (ದೊಡ್ಡಬಳ್ಳಾಪುರ) ಮಾನ್ಯ ಮಹಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು: ಇವುಗಳಲ್ಲಿ ಸ್ವಂತ ಕಟ್ಟಡಗಳಿರುವ ಸಂಖ್ಯೆ ಎಷ್ಟು: ಇಲ್ಲದೇ ಇರುವ ಸಂಖ್ಯೆ ಎಷ್ಟು:

ಆ) ಕಳೆದ 3 ವರ್ಷಗಳಿಂದ ತಾಲ್ಲೂಕಿಗೆ ಮಂಜೂರಾದ ಕಟ್ಟಡಗಳೆಷ್ಟು: ಯಾವ ಯಾವ ಗ್ರಾಮಗಳಲ್ಲಿ ನಿರ್ಮಿಸಲಾಗಿದೆ:

ಇ) ಬಾಕಿ ಉಳಿದ ಕಟ್ಟಡಗಳನ್ನು ಕಟ್ಟಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) 224 ಅಂಗನವಾಡಿ ಕೇಂದ್ರಗಳು
69 ಸ್ವಂತ ಕಟ್ಟಡ
155 ಕೇಂದ್ರಗಳಿಗೆ ಸ್ವಂತ ಕಟ್ಟಡ ಇಲ್ಲ.

ಆ) ಕಳೆದ 3 ವರ್ಷಗಳಿಂದ ಇಲಾಖಾ ವತಿಯಿಂದ ನಿರ್ಮಿಸಲು 19 ಕಟ್ಟಡಗಳನ್ನು ನಿರ್ಮಿಸಲಾಗಿದೆ. (ಪಟ್ಟಿ ಲಗತ್ತಿಸಿದೆ)

ಇ) ಅನುದಾನದ ಲಭ್ಯತೆಯ ಮೇರೆಗೆ ಹಂತ ಹಂತವಾಗಿ ಕಟ್ಟಡಗಳನ್ನು ನಿರ್ಮಿಸಲಾಗುತ್ತಿದೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 3659 ರ ಅನುಬಂಧ

ಕಳೆದ 3 ವರ್ಷಗಳಲ್ಲಿ ನಿರ್ಮಿಸಿರುವ ಅಂಗನವಾಡಿ ಕಟ್ಟಡಗಳ ವಿವರ

ಕ್ರಮ	ವರ್ಷ	ಗ್ರಾಮಗಳ ಹೆಸರು
1.	2000-01	ಹೊನ್ನಾವರ
		ಗೆಜ್ಜಗದ ಹಳ್ಳಿ
		ದೊಡ್ಡತುಮಕೂರು
		ಗುಂಡಮೆಗೆರೆ
		ತೊಗರಿಘಟ್ಟ
2.	2001-02	ಶ್ಯಾಕಲದೇವನಪುರ
		ಕುಂಟನಹಳ್ಳಿ
		ಕೆಸ್ತೂರು
		ಹಾದ್ರಿಪುರ
		ನಾರನಹಳ್ಳಿ

1	2	3
3.	2002–03	ಸಿಂಪಾಡಿಪುರ ಪುಟ್ಟೇನಅಗ್ರಹಾರ ಚಿಕ್ಕಹೆಚ್ಚಾಜಿ ಸಕ್ಕರೆಗೊಲ್ಲಹಳ್ಳಿ ಅಕ್ಕತಮ್ಮನಹಳ್ಳಿ ಕತ್ತಿ ಹೊಸಹಳ್ಳಿ ಕಾಡಲಪ್ಪನಹಳ್ಳಿ ಮೆಣಸಿ ತೂಬುಕುಂಟೆ

ಶ್ರೀ ಎ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಪ್ರಶ್ನೆಗಳಿಗೆ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ನನ್ನ ಮತಕ್ಷೇತ್ರವಾದ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ 69 ಸ್ವಂತ ಅಂಗನವಾಡಿ ಕೇಂದ್ರ ಕಟ್ಟಡಗಳು ನಿರ್ಮಾಣವಾಗಿದ್ದು, ಉಳಿದಮತೆ 155 ಕೇಂದ್ರಗಳಿಗೆ ಸ್ವಂತ ಕಟ್ಟಡ ಇಲ್ಲದಿರುವುದರಿಂದ ಕಟ್ಟಬೇಕಾಗಿದೆಯೆಂದು ಮಾಹಿತಿ ನೀಡಿದ್ದಾರೆ. ಸ್ವಂತ ಕಟ್ಟಡಗಳನ್ನು ನಿರ್ಮಿಸಲು ಏನು ಕ್ರಮ ಕೈಗೊಳ್ಳಲಾಗಿದೆ? ಈ ಕಟ್ಟಡಗಳನ್ನು ಕಟ್ಟಲು ಎಷ್ಟು ಕಾಲ ತೆಗೆದುಕೊಳ್ಳುತ್ತೀರಿ? ಸ್ವಂತ ಕಟ್ಟಡಗಳು ಇಲ್ಲದಿರುವುದರಿಂದ ಮಕ್ಕಳು ಕಾಂಪೌಂಡಿನಲ್ಲಿ ಹಾಗೂ ಮರಗಳ ಕೆಳಗೆ ಕುಳಿತು ಪಾಠ ಕಲಿಯುತ್ತಿರುವುದು ಮಂತ್ರಿಗಳ ಗಮನಕ್ಕೂ ಬಂದಿದೆ. ಅವರು ಚುರುಕಾಗಿ ಕೆಲಸ ಮಾಡುತ್ತಿರುವುದರಿಂದ ಇದರ ಬಗ್ಗೆ ಏನು ಕ್ರಮ ಕೈಗೊಂಡಿದ್ದಾರೆ? ನಿರ್ಮಾಣಗೊಂಡಿರುವ ಅರ್ಧ ಕಟ್ಟಡಗಳು ಕಳೆದ ಮೂರು ವರ್ಷಗಳಿಂದ ಮಳೆ ಬಂದು ಸೋರುತ್ತಿದೆ. ಮಕ್ಕಳು ಶಾಲಾ ಕಟ್ಟಡದೊಳಗೆ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಆದಕಾರಣ, ಆ ಕುರಿತು ಮಾನ್ಯ ಮಂತ್ರಿಗಳು ಸೂಕ್ತ ಕ್ರಮ ಕೈಗೊಳ್ಳುವ ಮೂಲಕ ಕಟ್ಟಡಗಳನ್ನು ಸಮರ್ಪಕವಾಗಿ ಕಟ್ಟುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀಮತಿ ಮೋಟಮ್ಮ : ಸನ್ಮಾನ್ಯ ಸಭಾಧ್ಯಕ್ಷರೆ, ಅಂಗನವಾಡಿ ಕಟ್ಟಡಗಳನ್ನು ಎಲ್ಲಾ ಕಡೆಗಳಲ್ಲೂ ಕಟ್ಟಬೇಕಾಗಿದೆ. ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಸುಮಾರು ಹತ್ತೊಂಬತ್ತು ಕಟ್ಟಡಗಳನ್ನು ಕಟ್ಟಲು ನಾವು ಕ್ರಮ ಕೈಗೊಂಡಿದ್ದೇವೆ. 2001ರಲ್ಲಿ ಐದು ಕಟ್ಟಡಗಳು, 2002ಲ್ಲಿ 5, ಈ ವರ್ಷ 6 ಮತ್ತು ನಬಾರ್ಡ್ ನೆರವಿನಿಂದ ಮೂರು ಕಟ್ಟಡಗಳು. ಹೀಗೆ ಒಟ್ಟು 19 ಕಟ್ಟಡಗಳನ್ನು ಕಟ್ಟಲು ಈಗಾಗಲೇ ಕ್ರಮ ಕೈಗೊಂಡಿದ್ದೇವೆ. ಅದರಲ್ಲಿ ಕೆಲವು ಪೂರ್ಣಗೊಂಡಿವೆ. ಇಡೀ ರಾಜ್ಯದಲ್ಲಿ 40,301 ಅಂಗನವಾಡಿ ಕೇಂದ್ರದ ಕಟ್ಟಡಗಳಿದ್ದು, 22,304 ಕಟ್ಟಡಗಳನ್ನು ಮಾತ್ರ ಕಟ್ಟಲಾಗಿದೆ. ಬಾಕಿ 17 ಸಾವಿರಕ್ಕೂ ಮಿಕ್ಕ ಕಟ್ಟಡಗಳನ್ನು ನಿರ್ಮಿಸಬೇಕಾಗಿದೆ. ಸದರಿ ಕಟ್ಟಡಗಳ ನಿರ್ಮಾಣ ಕಾರ್ಯದಲ್ಲಿ ಮಾನ್ಯ ಸದಸ್ಯರುಗಳು ಹೆಚ್ಚು ಆಸಕ್ತಿ ವಹಿಸಬೇಕು. ಏಕೆಂದರೆ, ಕಟ್ಟಡ ನಿರ್ಮಾಣ ಸಂಬಂಧ ಸರ್ಕಾರ ಹಣವನ್ನು ಜಿಲ್ಲಾ ಪರಿಷತ್‌ಗೆ ಒದಗಿಸಿಕೊಡುತ್ತದೆ. ಈಗ ನಬಾರ್ಡ್‌ನಿಂದ 25 ಕೋಟಿ ರೂಪಾಯಿಗಳಷ್ಟು ಹಣ ಕೇಳಿದ್ದು, ಸುಮಾರು 11 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. 2002–03ನೇ ಸಾಲಿಗೆ 660 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿರುವುದರಲ್ಲಿ ನಾವು 561 ಲಕ್ಷ

ರೂಪಾಯಿಗಳನ್ನು ಬಳಸಿಕೊಂಡಿದ್ದೇವೆ. ಈ ವರ್ಷಕ್ಕೆ ಒಂಭತ್ತು ಕೋಟಿ ರೂಪಾಯಿಗಳಿದ್ದು, ಈ ಹಣವನ್ನು ರಾಜ್ಯಾದ್ಯಂತ ಎಲ್ಲ ಕಡೆಗಳಲ್ಲಿ ಅಂಗನವಾಡಿ ಕೇಂದ್ರದ ಕಟ್ಟಡಗಳನ್ನು ಕಟ್ಟಲು ಕ್ರಮ ಕೈಗೊಳ್ಳುತ್ತೇವೆ. ಇನ್ನು ನಿರ್ಮಾಣಗೊಂಡ ಕಟ್ಟಡಗಳು ಸೋರುತ್ತಿರುವುದಾಗಿ ತಿಳಿಸಿರುವುದರ ಬಗ್ಗೆ ಹೇಳುವುದಾದರೆ, ಜಿಲ್ಲಾ ಪಂಚಾಯತ್‌ನವರೇ ಜವಾಬ್ದಾರಿ ತೆಗೆದುಕೊಳ್ಳುವ ಮೂಲಕ ಕಟ್ಟಡ ನಿರ್ಮಾಣ ಸರಿಯಾಗಿ ನಡೆಯುವಂತೆ ನೋಡಿಕೊಳ್ಳಬೇಕು. ಕಟ್ಟಡ ನಿರ್ಮಾಣ ಸರಿಯಾಗಿ ನಡೆದಿಲ್ಲವೆಂದರೆ ಕಟ್ಟಡ ಕಟ್ಟಿರುವ ಸಂಬಂಧಪಟ್ಟ ಕಂಟ್ರಾಕ್ಟರ್‌ನಿಂದ ಬಾಕಿ ಕ್ರಮಕ್ಕೆ ಒತ್ತಾಯ ಮಾಡಬೇಕಾಗುತ್ತದೆ. ತಮಗೆ ಗೊತ್ತಿರುವ ಂತೆ ನಮ್ಮ ಇಲಾಖೆಯು ಜಿಲ್ಲಾ ಪಂಚಾಯತ್‌ಗೆ ಹಣ ಒದಗಿಸಿಕೊಟ್ಟರೆ ಅವರು ಕಟ್ಟಡ ನಿರ್ಮಾಣ ಮಾಡುವ ಕೆಲಸ ಮಾಡುತ್ತಾರೆ. ಅದರ ಜವಾಬ್ದಾರಿಯನ್ನು ಜಿಲ್ಲಾ ಪಂಚಾಯತ್‌ನ ಸದಸ್ಯರುಗಳೇ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಅಧ್ಯಕ್ಷರು ದೊಡ್ಡಬಳ್ಳಾಪುವ ವಿಚಾರವನ್ನಷ್ಟೇ ನಾವು ಇಲ್ಲಿ ಮಾತನಾಡುತ್ತಿರತಕ್ಕದ್ದು ದೊಡ್ಡಬಳ್ಳಾಪುರದ ವಿಷಯದ ಬಗ್ಗೆ ಮಾತ್ರ ಮಾತನಾಡಿ.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಮಂತ್ರಿಗಳಿಗೆ ನಮಗೆ ನಿಮಗೆಲ್ಲಾ ಜಿಲ್ಲಾಪಂಚಾಯಿತಿಯ ಬಗ್ಗೆ ಗೊತ್ತಿದೆ. ಜಿಲ್ಲಾಪಂಚಾಯಿತಿಯಲ್ಲಿ ಎಷ್ಟರಮಟ್ಟಿಗೆ ಕಟ್ಟಡಗಳು, ರಸ್ತೆಗಳು ಆಗುತ್ತಿದೆ ಎಂಬುದು ಗೊತ್ತಿದೆ. ಅದರ ಬಗ್ಗೆ ನಾವೇ ನೋಡಿಕೊಳ್ಳಬೇಕೆಂದರೆ, ಜಿಲ್ಲಾಪಂಚಾಯಿತಿಯಲ್ಲಿ ಶಾಸಕರಿಗೆ ಯಾವುದೇ ವಿಧವಾದಂಥ ಮಾಹಿತಿಯೂ ಇಲ್ಲ ನಮಗೆ ಏನೂ ಗೊತ್ತೂ ಆಗುವುದಿಲ್ಲ. ಆದ್ದರಿಂದ ಕ್ರಮ ತೆಗೆದುಕೊಳ್ಳುವುದಕ್ಕೆ ಮಾನ್ಯ ಮಂತ್ರಿಗಳು ಸಂಬಂಧಪಟ್ಟವರಿಗೆ ತಿಳಿಸಬೇಕೆಂದು ತಮ್ಮ ಮೂಲಕ ಅವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಶಿವಾನಂದಪಾಟೀಲ್ : ಮಾನ್ಯ ಅಧ್ಯಕ್ಷರೆ, ಸಚಿವರು 660 ಕೋಟಿ ನಬಾರ್ಡ್ ಸಾಲ ಎಂದು ಹೇಳುತ್ತಿದ್ದಾರೆ, ರೆಕಾರ್ಡ್‌ನಲ್ಲಿ ಹೋಗಿದೆ. ಕೇಳಿ ಒಂದು ಸ್ವಲ್ಪ.....

ಅಧ್ಯಕ್ಷರು : ದೊಡ್ಡಬಳ್ಳಾಪುರ ಕ್ಷೇತ್ರಕ್ಕಾಗಿ ಕೇಳುತ್ತಿದ್ದಾರೆ.

ಶ್ರೀ ಎಸ್. ಶಿವಾನಂದಪಾಟೀಲ್ : ದೊಡ್ಡಬಳ್ಳಾಪುರಕ್ಕೆ ನಬಾರ್ಡ್‌ನವರು 660 ಕೋಟಿ ಸಾಲವನ್ನು ಕೊಡುತ್ತಾರೆಯೇ?

ಅಧ್ಯಕ್ಷರು : ಅವರು ಟೋಟೆಲ್ ಹೇಳುತ್ತಿರುವುದು. ಎಂಟೈರ್ ಸ್ಟೇಟ್ ಅವರು ಹೇಳುತ್ತಿರುವುದು.

ಶ್ರೀ ಎಸ್. ಶಿವಾನಂದಪಾಟೀಲ್ : ಟೋಟಲ್ ಆಗಿಯೂ 660 ಕೋಟಿ ಕೊಡಲು ಆಗುವುದಿಲ್ಲ. 660 ಲಕ್ಷ ಎಂದು ಹೇಳಬೇಕಾಗಿತ್ತು. ಕೋಟಿ ಎಂದು ಹೇಳಿದ್ದಾರೆ.

ಅಧ್ಯಕ್ಷರು : ಆಯಿತು 660 ಲಕ್ಷ ಅಂದರೆ 6 ಕೋಟಿಯಾಯಿತು ಬಿಡಿ.

ಮಲಪ್ರಭಾ ನದಿಗೆ ಮಹಾದಾಯಿ ಜೋಡಣೆ

412 (2970) ಶ್ರೀ ಬಿ.ಆರ್. ಯಾವಗಲ್ (ನರಗುಂದ) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಹಾದಾಯಿ ಕಣಿವೆಯ ನೀರನ್ನು ಮಲಪ್ರಭಾ ನದಿಗೆ ಜೋಡಿಸುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು: